

# ಬ್ಯಾಡ್ಮಿಂಟನ್ ಬಾಲ್ ಮರ!

**ಎಂಬತ್ತು ಅಡಿಗಳ ಎತ್ತರದವರೆಗೆ ಬೆಳೆಯಬಲ್ಲ 'ಬ್ಯಾಡ್ಮಿಂಟನ್ ಬಾಲ್ ಮರ' ಕನ್ನಡದಲ್ಲಿ 'ಶಿವಲಿಂಗದ ಮರ' ಎಂದು ಕರೆಸಿಕೊಳ್ಳುತ್ತದೆ.**

**■ ಬಿ.ಎಸ್. ರಾಜಲಕ್ಷ್ಮಿ**

ಹಾಸನದ ಮಲ್ನಾಡ್ ಎಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ ಬೆಳಗಿನ ವಾಯುವಿಹಾರಕ್ಕೆಂದು ಹೋಗಿದ್ದಾಗ ಕಾಲಿಗೆ ತೊಡರಿದ ವಸ್ತುವೊಂದು ಅಚ್ಚರಿ ಮೂಡಿಸಿತು. ಸುಮಾರು ಏಳೆಂಟು ಇಂಚುಗಳಷ್ಟು ಉದ್ದದ ತೊಟ್ಟು, ಅದರ ತುದಿಯಲ್ಲಿ ಕೆನೆ ಬಣ್ಣದ (ಉಲ್ಲನ್ನಿನಿಂದ ಮಾಡಿದಂತಹ) ಚೆಂಡಿನಾಕಾರದ ವಸ್ತು. ಬ್ಯಾಡ್ಮಿಂಟನ್ ಆಟದಲ್ಲಿ ಉಪಯೋಗಿಸುವ ಚೆಂಡಿನದೇ ಬಣ್ಣ ಮತ್ತು ಆಕಾರ ಇದಕ್ಕಿತ್ತು. ನಾನು ನಡೆಯುತ್ತಿದ್ದ ರಸ್ತೆ ಬದಿಯ ದೊಡ್ಡ ಮರದ ಕಾಯಿಯೆಂದುಕೊಂಡು, ಅದನ್ನು ತಂದು ಮನೆಯಲ್ಲಿಟ್ಟಿದ್ದೆ. ಮರುದಿನ ನೋಡಿದಾಗ ಮೇಲಿನ ಪಕಳೆಗಳೆಲ್ಲಾ ಉದುರಿ ಹೋಗಿ, ತೊಟ್ಟು ಮತ್ತು ಅದರ ತುದಿಯಲ್ಲಿ ಪುಟ್ಟ ಗೋಲಿಯಾಕಾರದ ಭಾಗ ಮಾತ್ರ ಉಳಿದಿತ್ತು.

ಅದರ ಬಗೆಗೆ ಕುತೂಹಲ ಮೂಡಿ, ಅಂತರ್ಜಾಲದಲ್ಲಿ ಹುಡುಕಲು ಮುಂದಾದೆ. ಆದರೆ, ಯಾವ ಪದದ ಮೂಲಕ ಹುಡುಕುವುದು? ಕತ್ತಲಲ್ಲಿ ಕಲ್ಲೆಸೆದಂತೆ 'ಬ್ಯಾಡ್ಮಿಂಟನ್ ಬಾಲ್ ಟ್ರೀ' (Badminton Ball Tree) ಎಂದೇ ಹುಡುಕಿದೆ. ಅಚ್ಚರಿಯಾಗುವಂತೆ ಆ ಮರದ ಬಗ್ಗೆ ವಿವರಗಳು ತೆರೆದುಕೊಂಡವು. ನಾನು ತೆಗೆದುಕೊಂಡು ಬಂದದ್ದು ಆ ಮರದ ಹೂವು!

ಒಮ್ಮೆ ಬೆಂಗಳೂರಿಗೆ ಹೋಗಿದ್ದಾಗ ಜಯನಗರದ ರಸ್ತೆ ಬದಿಯ ಬೃಹತ್ ಮರಗಳಡಿ ಅಂತಹುದೇ ವಸ್ತು ಮತ್ತೆ ಸಿಗಬೇಕೇ? ಕತ್ತೆತ್ತಿ ನೋಡಿದರೆ ಬೃಹದಾಕಾರದ ಮರದಲ್ಲಿ ಹಲವು ಹೂಗಳು ತೂಗಾಡುತ್ತಿದ್ದವು. ಆ ಮರಕ್ಕೆ 'ಬ್ಯಾಡ್ಮಿಂಟನ್ ಬಾಲ್ ಮರ' ಎಂದೇ ಸಾಮಾನ್ಯವಾಗಿ ಕರೆಯುತ್ತಾರೆ. ಇಂಗ್ಲಿಷಿನಲ್ಲಿ **African Locust Tree, GongStick Tree** ಎಂಬ ಸಾಮಾನ್ಯ ಹೆಸರುಂಟು. ಕನ್ನಡದಲ್ಲಿ 'ಶಿವಲಿಂಗದ ಮರ' ಎಂದು, ಹಿಂದಿ ಮತ್ತು ಮರಾಠಿಯಲ್ಲಿ 'ಚೆಂಡು ಹೂವಿನ ಮರ' ಎಂದು ಕರೆಯಲಾಗುತ್ತದೆ. ಇದರ ವೈಜ್ಞಾನಿಕ ಹೆಸರು ಪಾರ್ಕಿಯಾ ಬೈಗ್ಲಾಂಡುಲೋಸಾ. ಕುಟುಂಬ ಮೈಮೊಸಾಸಿಯೇ; ಮುಟ್ಟಿದರೆ ಮುನಿ ಗಿಡದ ಜಾತಿ.

ಪಶ್ಚಿಮ ಆಫ್ರಿಕಾ ಮೂಲದ ಈ ಮರವನ್ನು ನಮ್ಮ ದೇಶದಲ್ಲೂ ಹಲವು ನಗರಗಳಲ್ಲಿ ಕಾಣಬಹುದು. ಬೆಂಗಳೂರಿನ ಜಯನಗರ, ಜೆ.ಪಿ. ನಗರ, ಕಬ್ಬನ್ ಪಾರ್ಕ್ ಮುಂತಾದೆಡೆ ಇವನ್ನು ನೋಡಬಹುದು.

ಹಲವಾರು ಕೊಂಬೆಗಳನ್ನು ಹೊಂದಿ, 20ರಿಂದ 80 ಅಡಿಗಳವರೆಗೂ ಬೃಹತ್ತಾಗಿ ಬೆಳೆಯುವ ಈ ಮರದಲ್ಲಿ ಸಾಮಾನ್ಯವಾಗಿ ಅಕ್ಟೋಬರ್ ನವೆಂಬರ್ ತಿಂಗಳಿನಲ್ಲಿ ಗೋಲಿಯ ಗಾತ್ರದ ಮೊಗ್ಗುಗಳು ಕಾಣಿಸಿಕೊಳ್ಳುತ್ತವೆ. ಡಿಸೆಂಬರ್ ಜನವರಿಯ ಹೊತ್ತಿಗೆ ಉದ್ದನೆಯ ತೊಟ್ಟಿನಿಂದ ಇಳಿಬಿದ್ದ ಚೆಂಡಿನ ರೀತಿಯ, ಎರಡು ಮೂರು ಇಂಚು ವ್ಯಾಸವುಳ್ಳ, ಕೆನೆಬಣ್ಣದ ಹೂಗಳು ಅರಳುತ್ತವೆ. ಸ್ವಪರಾಗಸ್ಪರ್ಶದಿಂದ ಕ್ರಮೇಣ ಅವು ಬಟಾಣಿಯಂತೆ ಕಾಣುವ ಕಾಯಿಗಳಾಗಿ ಮಾರ್ಪಡುತ್ತವೆ. ಆ ಕಾಯಿ ಮತ್ತು ಒಳಗಿರುವ ಬೀಜಗಳನ್ನು ತಿನ್ನಲೂಬಹುದಂತೆ. ಈ ಮೂರು ನಾಲ್ಕು ತಿಂಗಳುಗಳನ್ನು ಬಿಟ್ಟು ಉಳಿದ ಕಾಲದಲ್ಲಿ ಈ ಮರವನ್ನು ಗುಲ್‌ಮೊಹರ್ ಮರವೆಂದು ತಪ್ಪು ತಿಳಿಯುವ ಸಾಧ್ಯತೆ ಇರುತ್ತದೆ. ಏಕೆಂದರೆ ಎರಡೂ ಮರಗಳ ಎಲೆಗಳು ಒಂದೇ ರೀತಿಯಾಗಿ ಕಾಣುತ್ತದೆ.

ರಸ್ತೆ ಬದಿಯ ಮರಗಳಡಿ ನಡೆಯುವಾಗ ಒಮ್ಮೆ ಕತ್ತೆತ್ತಿ ನೋಡಿ. ಇಂತಹ ಅಚ್ಚರಿಯ ಹೂ, ಕಾಯಿಗಳು ಕಣ್ಣಿಗೆ ಬೀಳಬಹುದು!

